'ಯಾಕೆ ಬಂದಿದ್ನಂತೆ?'

'ಇಲ್ಲೇ ಹೋಗ್ತಾ ಇದ್ದೆ, ನನ್ನ ಮಾತ್ನಾಡಿಸಿಕೊಂಡು ಹೋಗೋಣ ಅಂತ ಬಂದೆ ಅಂತಂದ್ರು'

'ನೆಟ್ಟಗೆ ಪರಿಚಯನೇ ಆಗಿಲ್ಲ. ನಿನ್ನತ್ರ ಅವನಿಗೇನು ಮಾತು?' ಅಸಹನೆಯಿಂದಲೇ ಕೇಳಿದ.

ಅವನ ಮಾತಿಗೆ ಪ್ರತಿಕ್ರಿಯಿಸದೆ, 'ಮೊಟ್ಟೆ ಆಮ್ಲೆಟ್ ಮಾಡಿದ್ದೀನಿ, ತರ್ತೀನಿ ತಡಿ' ಎಂದವಳು ಒಳಗೆ ಹೋಗಿ ಎರಡು ಪ್ಲೇಟುಗಳಲ್ಲಿ ಆಮ್ಲೆಟ್ ಹಾಕಿಕೊಂಡು ಬಂದಳು.

'ರಾಧಾ ನೀನು ಮೊಟ್ಟೆ ತಿಂತೀಯಾ?' ರಂಗನಾಥ ಆಶ್ಚರ್ಯದಿಂದ ಕೇಳಿದ.

'ಹ್ಞೂ ಕಣೋ ನಿನ್ಗೆ ಹೇಳಿರ್ಲಿಲ್ಲ ಅಷ್ಟೆ. ಅಷ್ಟಕ್ಕೂ ಇದ್ರಲ್ಲಿ ಆಶ್ಚರ್ಯ ಪಡೋದೇನಿದೆ. ನಮ್ಮಲ್ಲೂ ಕೆಲವ್ರು ಮಾಂಸಾನೇ ತಿಂತಾರೆ'

'ಅಯ್ಯಂಗಾರಿಗೂ ಕೊಟ್ಯಾ?'

'ಥೂ, ಇಲ್ಲಪ್ಪ' ಎನ್ನುತ್ತಾ ಆಮ್ಲೆಟ್ ತಿನ್ನತೊಡಗಿದಳು.

ತಿಂಗಳುಗಳು ಉರುಳಿದವು. ವಾರದಲ್ಲಿ ಮೂರ್‍ನಾಲ್ಕು ಸಾರಿ ರೂಮಿಗೆ ಬರುತ್ತಿದ್ದ, ಆಗಾಗ್ಗೆ ಫೋನ್ ಮಾಡುತ್ತಿದ್ದ ಕೃಷ್ಣಯ್ಯಂಗಾರಿ ಅಪರಿಚಿತನಂತಾಗಿದ್ದ. ರಂಗನಾಥನೇ ಫೋನ್ ಮಾಡಿದ್ರೆ, 'ತುಂಬಾ ಬ್ಯುಸಿ, ಆಮೇಲೆ ಮಾಡ್ತೀನಿ' ಎಂದಷ್ಟೇ ಹೇಳಿ ಕರೆ ಕಟ್ ಮಾಡಿದ್ದ. ಎಷ್ಟಾದರೂ ರಾಜ್ಯಮಟ್ಟದ ಪತ್ರಕರ್ತನಲ್ಲವೇ, ಏನೋ ಕೆಲಸದ ಒತ್ತಡದಲ್ಲಿರಬೇಕೆಂದು ರಂಗನಾಥನು ಸುಮ್ಮನಾಗಿದ್ದ.

ಅದೊಂದು ದಿನ ಸಂಜೆ ರಾಧಾಳ ಮನೆಗೆ ಹೋದಾಗ ಅವಳು ಬಚ್ಚಲಲ್ಲಿ ವಾಂತಿ ಮಾಡಿಕೊಳ್ಳುತ್ತಿದ್ದಳು. ರಂಗನಾಥ ಆತಂಕದಿಂದ 'ಏಕೆ ಏನಾಯ್ತು' ಎಂದು ಕೇಳಿದ.

'ಎರಡು ದಿನದಿಂದ ವಾಂತಿಯಾಗ್ತಿದೆ' ಎಂದಳು. ಅವಳು ಬೇಡವೆಂದರೂ ಬಿಡದೆ ಬೈಕಿನಲ್ಲಿ ಕೂರಿಸಿ ಕೊಂಡು ಕ್ಲಿನಿಕ್ಕಿಗೆ ಹೋದ. ಪರೀಕ್ಷೆ ಮಾಡಿದ ವೈದ್ಯರು ಹೇಳಿದರು.

'ಗಾಬರಿ ಪಡುವಂಥದ್ದೇನಿಲ್ಲ ಶೀ ಈಸ್ ಪ್ರಗ್ನೆಂಟ್. ಈ ಟಾನಿಕ್, ಮಾತ್ರೆಗಳನ್ನು ಕೊಡಿ' ಎಂದುಹೇಳಿ ಚೀಟಿ ಕೊಟ್ಟರು. ವೈದ್ಯರ ಮಾತಿಗೆ ಅರೆಕ್ಷಣ ಚಕಿತನಾದ ರಂಗನಾಥನಿಗೆ ಅಲ್ಲಿ ಏನೂ ಮಾತನಾಡಲಾಗದೆ ಅವಳನ್ನು ಕರೆದುಕೊಂಡು ಮನೆಗೆ ಬಂದ.

ಸ್ವಲ್ಪ ಹೊತ್ತು ಇಬ್ಬರೂ ಮಾತನಾಡಲಿಲ್ಲ. ಅವಳತ್ತ ಪ್ರಶ್ನಾರ್ಥಕ ನೋಟ ಬೀರಿದ. ಅದನ್ನು ಅರ್ಥ ಮಾಡಿಕೊಂಡ ಅವಳು, 'ನನ್ನಿಷ್ಟದಂತೆ ಮಾಡ್ಕೊಂಡಿದ್ದೀನಿ. ಬೇರೇನೂ ಇಲ್ಲ' ಎಂದಳು.

'ಯಾರವರು?'

'ನಿನ್ನ ಸ್ನೇಹಿತ ಕೃಷ್ಣಯ್ಯಂಗಾರಿ'

'ನಾನ್ ಫೋನ್ ಮಾಡಿದಾಗೆಲ್ಲ ಬ್ಯುಸಿ ಎನ್ನುತ್ತಿದ್ದ. ಆದ್ರೆ ಅವ್ನು ಬ್ಯುಸಿಯಾಗಿದ್ದು ರಾಧಾಳ ಜತೆ' ಎಂದು ಮನಸ್ಸಿನಲ್ಲೇ ಅಂದುಕೊಂಡ.

'ಕೊನೆಗೂ ನಿನ್ನ ಹಠವನ್ನೇ ಸಾಧಿಸಿ ಬಿಟ್ಟೆ'

'ಇದ್ರಲ್ಲಿ ಹಠವೇನು ಬಂತೋ, ನಿನಗೆ ಈಗಾಗ್ಲೆ ಹೇಳಿದಂತೆ ಇದು ನನ್ನ ವೈಯಕ್ತಿಕ ಆಯ್ಕೆ ಅಷ್ಟೆ'

ವೈದ್ಯರು ಬರೆದುಕೊಟ್ಟಿದ್ದ ಚೀಟಿ ಹಿಡಿದು ಹೊರ ಹೋದ ರಂಗನಾಥ ಟಾನಿಕ್ಕು, ಮಾತ್ರೆಗಳನ್ನು ತಂದು ಅವಳ ಕೈಗಿರಿಸಿದ.

'ದುಡ್ಡು ಕೊಡ್ತೀನಿ ತಡಿ' ಅಂದಳು.

'ಅದೆಲ್ಲ ಬೇಡ, ಹುಷಾರು' ಎಂದಷ್ಟೇ ಹೇಳಿ ತನ್ನ ರೂಮಿಗೆ ಬಂದ.

ಕೃಷ್ಣಯ್ಯಂಗಾರಿಗೆ ರಾಧಾಳ ವಿಷಯ ಹೇಳಿ ದೊಡ್ಡ ತಪ್ಪು ಮಾಡಿಬಿಟ್ಟೆ. ಇದಕ್ಕೆ ನಾನೇ ಕಾರಣ ಎಂದು ಪರಿತಪಿಸಿದ.

*

ಅವತ್ತಿನ ದಿನ ರಾಧಾಳ ಬಗ್ಗೆ ರಂಗನಾಥನಿಂದ ವಿಷಯ ತಿಳಿದುಕೊಂಡು ಕೃಷ್ಣಯ್ಯಂಗಾರಿ ಅವನಿಗೆ ಗೊತ್ತಿಲ್ಲದಂತೆ ಅವಳ ಮನೆಗೆ ಬಂದು ಹೋಗಿ ಮಾಡತೊಡಗಿದ್ದ. ಇದಕ್ಕೆ ರಾಧಾಳು ಸಾಥ್ ನೀಡಿದ್ದಳು. ಇಬ್ಬರ ನಡುವೆ ಸಲುಗೆ ಬೆಳೆಯಿತು. ಮೊಬೈಲ್ ನಂಬರ್‌ಗಳು ಪರಸ್ಪರ ವಿನಿಮಯವಾದವು.

ಒಂದು ದಿನ ಕೇಳಿಯೇ ಬಿಟ್ಟ.

'ನಿಮ್ಮ ಬಗ್ಗೆ ರಂಗನಾಥ ಹೇಳಿದ್ದು ನಿಜವೇ?'

'ಏನು ಹೇಳಿದ?'

'ನೀವು ಮದುವೆಯಾಗದೆ ಮಗು ಪಡೆಯಬೇಕೆಂದಿರುವ ವಿಷಯ'

'ಹೌದು ನಿಜ'

'ಯಾರಾದರೂ ಸಿಕ್ಕಿದ್ದಾರೆಯೇ?'

ಅವನ ಮನಸ್ಸಿನಲ್ಲಿರುವುದನ್ನು ಸ್ಕ್ಯಾನ್ ಮಾಡಿದವಳಂತೆ ಕೇಳಿದಳು.